ನೀವು ಸುರಕ್ಷಿತವಾಗಿದ್ದೀರಿ. ಸೀಟ್ ಬೆಲ್ಟುಗಳನ್ನು ಯಾವುದೇ ಕಾರಣಕ್ಕೂ ತೆಗೆಯಬೇಡಿ. ಯಾವುದೇ ರೀತಿಯ ಗೊಂದಲ ಸೃಷ್ಟಿಸಬೇಡಿ... ಪ್ಲೀಸ್... ಕೀಪ್ ಕಾಮ್ ಅಂಡ್ ಕೂಲ್... ನಿಮ್ಮ ಸುರಕ್ಷೆ ನಮ್ಮ ಹೊಣೆ..."

ಕ್ಯಾಪ್ಟನ್ ಮಾತು ಕೇಳುತ್ತಿದ್ದರೂ ಜನ ಅದನ್ನು ನಂಬಲು ಸಿದ್ಧರಿರಲಿಲ್ಲ!

ಹಂತಹಂತವಾಗಿ ಕೆಳಗಿಳಿಯುತ್ತಿದ್ದ ವಿಮಾನ ಮತ್ತೆ ಮೇಲೇರತೊಡಗಿತು. ದೇವರಾಜು ಕೂಡ ಎಲ್ಲರಂತೆ ಗಾಬರಿಗೊಂಡರು. ಇದು ಅವರ ಮೊದಲ ವಿದೇಶ ಪ್ರಯಾಣ. ಹೋಗುವಾಗ ಎಲ್ಲ ಚೆನ್ನಾಗಿತ್ತು! ಈಗ ವಾಪಸ್ಸು ಬರುವಾಗ ಹೀಗಾಗಬೇಕೆ?

"ವಾಟ್ ಕೆನ್ ಹ್ಯಾಪನ್?..." ದೇವರಾಜು ಪಕ್ಕದವನನ್ನು ಕೇಳಿದರು. ಅವನು ವಿದೇಶೀಯ. ಬಹಳ ಸಲ ವಿಮಾನದಲ್ಲಿ ಪ್ರಯಾಣಿಸಿದ ಅನುಭವ ಅವನಿಗಿರುತ್ತದೆ ಎನ್ನುವ ನಂಬಿಕೆ ಅವರಿಗಿತ್ತು.

"ರನ್‌ವೇ ಚೆನ್ನಾಗಿ ಕಾಣುವವರೆಗೂ ವಿಮಾನ ಆಕಾಶದಲ್ಲೇ ಇರುತ್ತದೆ... ಲ್ಯಾಂಡಿಂಗ್ ಡಿಲೇ ಆಗಬಹುದು... ಅಂಡ್ ಎನಿಥಿಂಗ್ ಕೆನ್ ಹ್ಯಾಪನ್! ಇಟ್ ಈಸ್ ಎ ಬ್ಯಾಡ್ ಸಿಚುಯೇಶನ್."

ಬೋಯಿಂಗ್ ವಿಮಾನದಲ್ಲಿದ್ದ ಸುಮಾರು ಮುನ್ನೂರೈವತ್ತು ಪ್ರಯಾಣಿಕರು ಜೀವ ಕೈಯಲ್ಲಿ ಹಿಡಿದು ದೇವರನ್ನು ಪ್ರಾರ್ಥಿಸುತ್ತಿದ್ದರು! ಯಾವ ಕ್ಷಣದಲ್ಲಿ ಏನುಬೇಕಾದರೂ ಆಗಬಹುದು ಎನ್ನುವ ನಿರೀಕ್ಷೆಯಿಂದ ಎಲ್ಲ ಭಯಭೀತರಾಗಿದ್ದರು!

"ಮದ್ರಾಸು ಅಥವಾ ಮುಂಬೈ ವಿಮಾನ ನಿಲ್ದಾಣದಲ್ಲಿ ವಿಮಾನ ಇಳಿಸುವ ಸಾಧ್ಯತೆಗಳನ್ನು ಪರಿಶೀಲಿಸುತ್ತಿದ್ದೇವೆ. ಯಾರೂ ಭಯಪಡಬೇಕಾದ ಅಗತ್ಯವಿಲ್ಲ. ಮದ್ರಾಸು ನಮ್ಮ ಗಮನದಲ್ಲಿದೆ. ಆದರೆ ಅಲ್ಲಿ ಚಂಡಮಾರುತದ ಪರಿಣಾಮ ಬೆಂಗಳೂರಿಗಿಂತಲೂ ಹೆಚ್ಚಿದೆ ಎಂದು ಮಾಹಿತಿ ಬಂದಿದೆ... ಮತ್ತೆ ಈಗ ಬೆಂಗಳೂರಿನ ಕಡೆಗೆ ವಿಮಾನ ಹೋಗುತ್ತಿದೆ... ಮುಂಬೈಗೆ ಹೋಗಲು ಹೆಚ್ಚು ಇಂಧನ ಉಳಿದಿಲ್ಲ... ಆದರೆ, ಆತಂಕಕ್ಕೆ ಕಾರಣವಿಲ್ಲ..."

ವಿಮಾನದ ಲೈಟುಗಳೆಲ್ಲಾ ಇದ್ದಕ್ಕಿದ್ದಂತೆ ಆರಿದವು! ಒಮ್ಮೆಲೇ ಅತೀವವಾದ ಬೆಳಕಿನ ಸ್ಫೋಟವಾದಂತಾಯಿತು. ಭಾರೀ ಶಬ್ದ! ಏನಾಯಿತೋ ಯಾರಿಗೂ ತಿಳಿಯುವಂತಿರಲಿಲ್ಲ! ಅತೀವ ಬೆಳಕು ಒಮ್ಮೆಲೇ ಮೂಡಿದ್ದು, ಆ ಬೆಳಕಿನಲ್ಲಿ ಸಾವಿನ ಛಾಯೆಯ ಮುಖಗಳನ್ನು ಕಂಡರು ದೇವರಾಜು! 'ಹೇ... ದೇವರೇ... ರಕ್ಷಿಸು' ಎನ್ನುವಾಗ... ಎಚ್ಚರ ತಪ್ಪಿತು.

ಎಷ್ಟು ಸಮಯ ಹೀಗೆ ಕಳೆಯಿತು ಲೆಕ್ಕಕ್ಕೆ ಬರಲಿಲ್ಲ ದೇವರಾಜುಗೆ. ಒಮ್ಮೆಲೇ ವಿಮಾನದ ಸೀಟಿಗೆ ಬಂದಿಸಿದ್ದ ಸೀಟ್ ಬೆಲ್ಟಿನ ಮೇಲಿನ ಬಿಗಿ ಕಾಣಿಸಲಿಲ್ಲ. ಅದು ಯಾವಾಗಲೋ ತನ್ನಷ್ಟಕ್ಕೆ ತೆರೆದುಕೊಂಡಂತಿತ್ತು! ತಲೆಯ ಮೇಲೊಂದು ವಿಮಾನದ ಛಾವಣಿಯ ಲೋಹದ ತುಣುಕಿತ್ತು. ದೇವರಾಜು ಎದ್ದರು. ಹೆಚ್ಚಿಗೆ ಕಷ್ಟವಾಗದಂತೆ ತಲೆಯ ಮೇಲಿದ್ದ ಲೋಹದ ತುಣುಕು ಪಕ್ಕಕ್ಕೆ ಬಿತ್ತು. ಶ್ರಮವಿಲ್ಲದೆ ಎದ್ದ ದೇವರಾಜು ಸುತ್ತ ನೋಡಿದರು. ಕಂಡಿದ್ದು ಭಯಾನಕವಾಗಿತ್ತು! ವಿಮಾನ ಹಲವು ಹೋಳಾಗಿತ್ತು! ಜನರು ಚೆಲ್ಲಾಪಿಲ್ಲಿಯಾಗಿ ತಂತಮ್ಮ ಸೀಟಿನ ಸಮೇತ ಬಿದ್ದಿದ್ದರು! ಕೆಲವರ ರಕ್ತಸಿಕ್ತ ದೇಹಗಳು ಕಂಡವು! ತೂತಾಗಿದ್ದ ವಿಮಾನದೊಳಗೆ ಮಳೆ ನೀರು ಸುರಿಯುತ್ತಿತ್ತು. ಆಚೆ ಧೋ ಎಂದು ಸುರಿಯುತ್ತಿದ್ದ ಮಳೆ... ಆ ಮಳೆಯಲ್ಲಿ ನೂರಾರು ವಾಹನಗಳು, ಆಂಬುಲೆನ್ಸ್‌ಗಳ ಜೊತೆಗೆ ಜನರು ವಿಮಾನವನ್ನು ಸುತ್ತುವರಿದಿದ್ದರು! ಕೆಲವು ಜನರು ವಿಮಾನದೊಳಗೂ ಬಂದಿದ್ದರು! ವಿಮಾನ ನೆಲಕ್ಕಪ್ಪಳಿಸಿದೆ ಎನ್ನುವ ಘೋರ ಸತ್ಯ